





ಬೆಲ್ಟ್ ಯಾವುದೇ ಹೈಹೀಲ್ಸ್, ಸ್ಯಾಂಡಲ್, ಶೂ ಜೊತೆಗೆ ಹೊಂದಿಕೆಯಾಗುತ್ತದೆ.

## ಶರ್ಟ್ ಡ್ರೆಸ್

ಧರಿಸಲು ಸುಲಭ ಮತ್ತು ಆರಾಮದಾಯಕ ಶರ್ಟ್ ಡ್ರೆಸ್‌ಗಳೀಗ ಫ್ಯಾಷನ್‌ಪ್ರಿಯರ ಮೆಚ್ಚುಗೆಗೆ ಪಾತ್ರವಾಗಿದೆ. ಕಾಟನ್ ಮತ್ತು ಖಾದಿ ಶರ್ಟ್ ಡ್ರೆಸ್‌ಗಳು ಕಾರ್ಪೊರೇಟ್ ಮಹಿಳೆಯರಿಗೆ ಉತ್ತಮ ಆಯ್ಕೆಯಾಗಿದೆ. ಉಲ್ಲನ್, ಜೀನ್ಸ್, ಲೆದರ್ ಫ್ಯಾಬ್ರಿಕ್‌ನಿಂದ ತಯಾರಾದ ಶರ್ಟ್ ಡ್ರೆಸ್‌ಗಳು ಚಳಿಯಿಂದ ಬೆಚ್ಚಗಿರಿಸುತ್ತವೆ. ಬೇಸಿಗೆಯಲ್ಲಿ ತುಂಬು ತೋಳಿನ ಡ್ರೆಸ್ ಸನ್‌ಟ್ಯಾನ್‌ನಿಂದ ಕಾಪಾಡುತ್ತದೆ. ಒಟ್ಟಿನಲ್ಲಿ ಎಲ್ಲ ಕಾಲಮಾನಕ್ಕೂ ಹೊಂದಿಕೆಯಾಗುವ, ಕಂಫರ್ಟಬಲ್ ಜೊತೆಗೆ ಫ್ಯಾಷನ್ ಸ್ಟೇಟ್‌ಮೆಂಟ್ ಮೆರೆಯಲು ಅನುಕೂಲವಾದ ಶರ್ಟ್ ಡ್ರೆಸ್‌ಗಳೀಗ ವಾರ್ಡ್‌ರೋಬ್‌ನಲ್ಲಿ ಶಾಶ್ವತ ಸ್ಥಾನ ಗಿಟ್ಟಿಸುವುದರಲ್ಲಿ ಸಂಶಯವಿಲ್ಲ.

ಚಂದದ ಲೇಯರ್‌ನಿಂದ ಕೂಡಿರುವ ಪ್ಲೀಟೆಡ್ ಶರ್ಟ್ ಡ್ರೆಸ್‌ಗಳು ಕಾಲೇಜು, ಕಚೇರಿ, ಸಮಾರಂಭ... ಎಲ್ಲದಕ್ಕೂ ಸೂಕ್ತ ಎನಿಸುವಂತಿದೆ. ಎಂಬ್ರಾಯಿಡರಿ ಡಿಸೈನ್ ಇರುವ ರೌಂಡ್ ನೆಕ್ ಶರ್ಟ್‌ಗಳು ಉದ್ದದ ಕುರ್ತಾ ಹಾಗೆಯೇ ಇದ್ದು ಮೊಣಕಾಲಿಗಿಂತ ಕೆಳಗೆ ಬರುತ್ತವೆ. ತಿಳಿ ಬಣ್ಣದ ಬಟ್ಟೆಯ ಮೇಲೆ ತೆಳ್ಳಗಿನ ಗೆರೆಗಳಿರುವ ಈ ಡ್ರೆಸ್‌ಗಳು ಹೆಂಗಳೆಯರ ಅಂದ ಇಮ್ಮಡಿಗೊಳಿಸುತ್ತವೆ. ಶಾಪಿಂಗ್, ಔಟಿಂಗ್, ಪಿಕ್‌ನಿಕ್ ಹೋಗಲು ಸೂಕ್ತವೆನಿಸುವ 'ವಿ ನೆಕ್ ಪಿನ್ ಸ್ಟ್ರಿಪ್ ಶರ್ಟ್ ಡ್ರೆಸ್'ಗಳು ಎಲ್ಲ ಆನ್‌ಲೈನ್ ಶಾಪಿಂಗ್ ಸೈಟ್‌ಗಳಲ್ಲಿ ಲಭ್ಯ.

ಹೆಚ್ಚು ದುಬಾರಿ ಎನಿಸದ ಪಾಪ್ಲಿನ್ ಕ್ಯಾಷುವಲ್ ಡ್ರೆಸ್‌ಗಳು ನೀಲಿ ಮತ್ತು ಬಿಳಿ ಬಣ್ಣದ ಶೇಡ್‌ನಲ್ಲಿ ದೊರೆಯುತ್ತವೆ. ಬೆಲ್ಟ್ ಬದಲು ಇಲಾಸ್ಟಿಕ್ ಇರುವ ಈ ತರದ ಉಡುಪುಗಳು ಡೀಸೆಂಟ್ ಲುಕ್ ನೀಡುತ್ತವೆ. ಈ ಎರಡೂ ತರಹದ ಬೆಲ್ಟ್ ಮತ್ತು ಶರ್ಟ್ ಡ್ರೆಸ್‌ಗಳನ್ನು 'ಮಿಕ್ಸ್ ಆ್ಯಂಡ್ ಮ್ಯಾಚ್' ಮಾಡಿ ಧರಿಸಬಹುದು. ಜೀನ್ಸ್, ಲೆಗಿಂಗ್ಸ್, ಸ್ಕರ್ಟ್ ಗಳ ಜೊತೆಗೂ ಧರಿಸಿ ನೋಡಬಹುದು. ಚಳಿಗಾಲವಾದರೆ ಮೇಲೊಂದು ಜಾಕೆಟ್ ಅಥವಾ ಕೋಟ್ ಧರಿಸುವುದು ಒಳ್ಳೆಯದು. ಆಧುನಿಕ ಟಚ್ ಇರುವುದರಿಂದ ಒಡವೆ ಧರಿಸಿದರೆ ಚೆನ್ನಾಗಿ ಕಾಣುವುದಿಲ್ಲ. ಸಣ್ಣದೊಂದು ಸರ ಅಥವಾ ಚೋಕರ್, ಬ್ರೇಸ್‌ಲೆಟ್, ಆರ್ಟಿಫೀಷಿಯಲ್ ಆ್ಯಂಕ್ಲೆಟ್ ಅದ್ಭುತ ನೋಟ ನೀಡುತ್ತದೆ.

## ಮತ್ತೆ ಬಂದಿದೆ ರೆಟ್ರೊ ಫ್ಯಾಷನ್

'ಓಲ್ಡ್ ಈಸ್ ಗೋಲ್ಡ್' ಎನ್ನುವ ಮಾತಿನಂತೆ ಫ್ಯಾಷನ್ ಲೋಕದಲ್ಲಿ ಹಳತಾಯಿತು ಎಂಬುದೇ ಇಲ್ಲ. ಫ್ಯಾಷನ್ ಡಿಸೈನರ್ ಕೈಯಲ್ಲಿ ವೈವಿಧ್ಯಮಯ ವಿನ್ಯಾಸದಿಂದ ಮರುಹುಟ್ಟು ಪಡೆದು ಮೆರೆಯುತ್ತದೆ. ಈ ಮಾತಿಗೆ ಒಂದು ಉತ್ತಮ ಉದಾಹರಣೆ ರೆಟ್ರೊ ಫ್ಯಾಷನ್.

ರಿಬ್ಬನ್ ಕಟ್ಟಿದ ಪೋನಿ ಟೈಲ್, ಬೈತಲೆ ಬಾಚಿದ ಉದ್ದ ಜಡೆ, ಹಣೆ ಮೇಲೆ ಹೊಳೆಯುವ ಬಿಂದಿ, ಹೂವಿನ ಅಥವಾ ಡಾಟ್ ಇರುವ ಸೀರೆ ಇವೆಲ್ಲವನ್ನೂ ಸುಮಾರು 70–80 ದಶಕದ ಚಲನಚಿತ್ರದಲ್ಲಿ ಕಾಣಬಹುದಿತ್ತು. ಕಾಲ ಮುಂದುವರೆದಂತೆ ಮರೆಯಾಗಿದ್ದ ಈ ಲುಕ್ ಇತ್ತೀಚಿನ ದಿನಗಳಲ್ಲಿ ಮತ್ತೆ ಹೊಸ ನಾಮಕರಣದೊಂದಿಗೆ ಹೆಸರು ಮಾಡುತ್ತಿದೆ. ರೀಲ್ಸ್‌ಗಳಲ್ಲಿ ರೆಟ್ರೊ ಕಾಲದ ಉಡುಪು ಮತ್ತು ಮೇಕಪ್ ಮಾಡಿಕೊಂಡು ಹಳೆಕಾಲದ ಹಾಡುಗಳಿಗೆ ಹೆಜ್ಜೆ ಹಾಕುತ್ತಿದ್ದಾರೆ. ಪ್ರಿವೆಡ್ಡಿಂಗ್ ಶೂಟ್, ಮೆಟರ್ನಿಟಿ ಶೂಟ್‌ಗಳಲ್ಲಿ ರೆಟ್ರೊ ಗಾಳಿ ಬೀಸುತ್ತಿದೆ. ಮುಖ್ಯವಾಗಿ ಪೋಲ್ಕಾ ಡಾಟ್ ಡ್ರೆಸ್‌ಗಳಿಗೆ ಬೇಡಿಕೆ ಹೆಚ್ಚಿದೆ ಎನ್ನುತ್ತಾರೆ ಫ್ಯಾಷನ್ ಆರ್ಟಿಸ್ಟ್‌ಗಳು. ಸೊಂಟಕ್ಕೆ ದೊಡ್ಡ ಬೆಲ್ಟ್, ದಪ್ಪ ಫ್ರೇಮ್ ಹೊಂದಿರುವ ಸನ್ ಗ್ಲಾಸ್, ಕುತ್ತಿಗೆಯ ಸುತ್ತ ಚಂದದ ಸ್ಕಾರ್ಫ್, ಪೋನಿ ಟೈಲ್‌ಗೆ ರಿಬ್ಬನ್, ಮುತ್ತಿನ ಹಾರ, ರೆಟ್ರೊ ಲುಕ್ ಅನ್ನು ಪ್ರತಿನಿಧಿಸುತ್ತವೆ.

ಹಳೆಕಾಲದ ಸಿನಿಮಾ ಹೀರೊಗಳು ಧರಿಸುತ್ತಿದ್ದ ಬೆಲ್ ಬಾಟಮ್ ಪ್ಯಾಂಟ್‌ಗಳೀಗ ಯುನಿಸೆಕ್ಸ್ ಮಾದರಿಯಲ್ಲಿ ಲಭ್ಯವಿದೆ. ಪಲಾಜೊ ಪ್ಯಾಂಟ್ ಸಹ ಇದರದ್ದೇ ಮುಂದುವರಿದ ರೂಪವಾಗಿದೆ. ಫ್ಲೋರಲ್ ಪ್ರಿಂಟ್ ಮತ್ತು ಪೋಲ್ಕಾ ಡಾಟ್ ಇರುವ ಸೀರೆಗಳೂ ಚಂದದ ಲುಕ್ ಕೊಡುತ್ತವೆ. ವಿಶ್ವ ಯುದ್ಧ ಸಮಯದಲ್ಲಿ ಪರಿಚಯಿಸಲಾದ ಕಾರ್ಗೋ ಪ್ಯಾಂಟ್‌ಗಳು ಸಹ ರೆಟ್ರೊ ಫ್ಯಾಷನ್‌ನ ಒಂದು ಭಾಗ. ಮಿಲಿಟರಿ ಮತ್ತು ಸಫಾರಿ ಉದ್ದೇಶಕ್ಕಾಗಿ ಬಳಕೆಯಾಗುತ್ತಿದ್ದ ಇಂತಹ ಪ್ಯಾಂಟ್‌ಗಳೀಗ ಟ್ರೆಕ್ಕಿಂಗ್, ಫಾರೆಸ್ಟ್ ವಾಕ್‌ಗಳಿಗೆ ಬೆಸ್ಟ್.

ಉದ್ಯೋಗಸ್ಥ ಮಹಿಳೆಯರಿಗೆ ತಮ್ಮ ವೃತ್ತಿಗೆ ಮ್ಯಾಚ್ ಆಗುವ ಉಡುಪು ಧರಿಸುವ ಅನಿವಾರ್ಯತೆ ಇರುತ್ತದೆ. ಅಂತಹ ಸಂದರ್ಭದಲ್ಲಿ ಫ್ಯಾಷನ್ ಜೊತೆಗೆ ಡೀಸೆಂಟ್ ಆಗಿ ಕೂಡ ಕಾಣಲು ರೆಟ್ರೊ ಫ್ಯಾಷನ್ ಅನುಕೂಲಕರ. ಕ್ಯಾಷುವಲ್ ವೇರ್‌ನಲ್ಲಿ ಹುಡುಕಾಡಿದರೆ ಸಡಿಲ ಬಟ್ಟೆಗಳು ಚಾಲ್ತಿಯಲ್ಲಿವೆ. ಪುಲ್ಲರ್ ಬಲೂನ್ ಸ್ಲೀವ್ ಮತ್ತು ಶಾರ್ಟ್ ಪುಲ್ಲರ್ ಬೆಲ್ ಸ್ಲೀವ್ ಬೆಸ್ಟ್. ಜೀನ್ಸ್ ಪ್ಯಾಂಟ್‌ಗಳ ಅಬ್ಬರದಲ್ಲಿ ಮಹಿಳೆಯರು ಲೆಗಿಂಗ್ಸ್ ಕಡೆಗೆ ವಾಲಿರುವುದೂ ಸಹ ರೆಟ್ರೊ ಫ್ಯಾಷನ್‌ನ ಮರುಹುಟ್ಟಿಗೆ ಒಂದು ನಿದರ್ಶನ. ಹಳೆಯ ಸಿನಿಮಾಗಳಲ್ಲಿ ಕಾಣುತ್ತಿದ್ದ ಹೊಳೆಯುವ ಸ್ಕಿನ್ ಕಲರ್ ಪ್ಯಾಂಟ್‌ಗಳೇ ಲೆಗಿಂಗ್ಸ್‌ಗಳಾಗಿವೆ. ಎಲ್ಲ ವಯೋಮಾನದ ಮಹಿಳೆಯರು ಇಷ್ಟಪಡುವ ಲೆಗ್ಗಿಂಗ್ಸ್‌ಗಳು ಪರ್ಫೆಕ್ಟ್ ಶೇಪ್ ಜೊತೆಗೆ ಎಲ್ಲಾ ಬಗೆಯ ಟಾಪ್, ಕುರ್ತಾಗಳ ಜೊತೆಗೆ 'ಮಿಕ್ಸ್ ಆ್ಯಂಡ್ ಮ್ಯಾಚ್' ಮಾಡಿ ಧರಿಸಬಹುದು.

ಗೌನ್‌ಗಳನ್ನು ಧರಿಸಿದರೂ ಎಲಿಗೆಂಟ್ ಆಗಿ ಕಾಣಬಹುದು. ತಿಳಿ ಬಣ್ಣದ ಗೌನ್‌ಗಳನ್ನು ಆಯ್ಕೆ ಮಾಡಿ. ಇದರ ಜತೆ ಚಿಕ್ಕ ಚಿಕ್ಕ ಜುಮ್ಕಾ ಹಾಗೂ ಕಡ ಧರಿಸಿ. ಈ ವಿನ್ಯಾಸದ ಗೌನ್ ಆಫೀಸಿಗೆ ಆರಾಮದಾಯಕವೆನಿಸುತ್ತದೆ.